ತಾಲ್ಲೂಕು ಪಂಚಾಯತ್ ಮಟ್ಟದ ಜೀವವೈವಿಧ್ಯ ನಿರ್ವಾಹಣಾ ಸಮಿತಿ

ನಡವಳಿ ಸಂಖ್ಯೆ:- 23 ದಿನಾಂಕ:- 22-05-2015

ತಾಲ್ಲೂಕು ಪಂಚಾಯತಿ ಹುಣಸೂರು, ಜಿಲ್ಲೆ ಮೈಸೂರು.

ದಿನಾಂಕ:-22-05-2015 ರಂದು ಶ್ರೀ ಡಿ ಸದಾನಂದ, ಅಧ್ಯಕ್ಷರು, ತಾಲ್ಲೂಕು ಪಂಚಾಯ್ತಿ ಇವರ ಅಧ್ಯಕ್ಷತೆಯಲ್ಲಿ ಹುಣಸೂರು ತಾಲ್ಲೂಕು ಪಂಚಾಯ್ತಿ ಕಾರ್ಯಾಲಯದಲ್ಲಿ 11 ಗಂಟೆಗೆ ಸಭೆ ಸೇರಿ ಹಾಜರಿದ್ದ ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಜೈವಿಕ ವೈವಿಧ್ಯ ನಿಯಮಗಳು 2005ರ ನಿಯಮ 21 ರ ಪ್ರಕಾರ 3 ವರ್ಷಗಳ ಅವಧಿಗೆ ಈ ಕೆಳಕಂಡಂತೆ ಜೀವವೈವಿಧ್ಯತೆ ನಿರ್ವಹಣಾ ಸಮಿತಿಯನ್ನು ರಚಿಸಲಾಯಿತು.

ಕ್ರ ಸಂ,	ಪೂರ್ಣ ಹೆಸರು	ವಯಸ್ಸು	ಹುದ್ದೆ	ವರ್ಗ ಸಹಿ	ಸಹಿ
1	ಸದಾನಂದ ಡಿ		ಅಧ್ಯಕ್ಷರು	ಇತರೆ	
2	ಚಂದ್ರಕಲಾ ನುಂಚನಾಯ್ಕ		ಮಹಿಳಾ ಸದಸ್ಯರು	ಪ, ಪಂ	
3	ಜಯರತ್ನ ಮಹೇಂದ್ರ		ಮಹಿಳಾ ಸದಸ್ಯರು	ಪ, ಜಾತಿ	
4	ಪ್ರಭಾಕರ		ಪ,ಜಾತಿ/ಪ,ಪಂ ಸದಸ್ಯರು	ಪ, ಜಾತಿ	
5	ಪ್ರಸನ್ನ ಕುಮಾರ್		ಸದಸ್ಯರು	ಪ, ಪಂ	
6	ರಂಗಸ್ವಾಮಿ		ಸದಸ್ಯರು	ಇತರೆ	
7	ಡಾ|| ಪ್ರೇಮ್ ಕುಮಾರ್		ಕಾರ್ಯದರ್ಶಿ (ಕಾರ್ಯನಿರ್ವಾಹಣಾಧಿಕಾರಿಗಳು ತಾಲ್ಲೂಕು ಪಂಚಾಯ್ತಿ ಹುಣಸೂರು)	ಪ, ಜಾತಿ	

ಜೀವವೈವಿಧ್ಯ ನಿರ್ವಾಹಣಾ ಸಮಿತಿಯ ಜವಾಬ್ದಾರಿಗಳು

1. ಜೀವವೈವಿಧ್ಯ ನಿರ್ವಾಹಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವಂತಹ ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಹಾಗೂ ನಿರ್ವಹಣೆ.
2. ಜೀವವೈವಿಧ್ಯ ನಿರ್ವಾಹಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವಂತಹ ಜೈವಿಕ ಸಂಪನ್ಮೂಲಗಳ ಕಾನೂನು ಬಾಹಿರ ಹಾಗೂ ಅನಿಯಮಿತ ಚಟುವಟಿಕೆಗಳನ್ನು ತಡೆಯುವುದು.
3. ಅನುಮೋದನೆ ನೀಡುವುದಕ್ಕಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿ ಅಥವಾ ಪ್ರಾಧಿಕಾರವು, ತನಗೆ ಕಳುಹಿಸಿದ ಯಾವುದೇ ವಿಷಯಗಳ ಬಗ್ಗೆ ಸಲಹೆ ನೀಡುವುದು.
4. ಜೀವವೈವಿಧ್ಯ ನಿರ್ವಾಹಣಾ ಸಮಿತಿಯು, ತನ್ನ ಕೇಂದ್ರಾಡಳಿತ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯುವುದಕ್ಕಾಗಿ ಅಥವಾ ಅಂಗ್ರಹಿಸುವುದಕ್ಕಾಗಿ ಯಾರೇ ವ್ಯಕ್ತಿಯಿಂದ ಶುಲ್ಕ ರೂಪವಾಗಿ ವೆಚ್ಚಗಳನ್ನು ವಿಧಿಸಬಹುದು.
5. ಜೈವಿಕ ಸಂಪನ್ಮೂಲಗಳನ್ನು ಬಳಸುವ ಸ್ಥಳೀಯ ವೈದ್ಯರು ಮತ್ತು ವೃತ್ತಿನಿರತರ ಬಗ್ಗೆ ಅಂಕಿ ಅಂಶ ಮಾಹಿತಿಯನ್ನು ನಿರ್ವಹಿಸುವುದು
6. ಸಮಿತಿಯು ನೀಡಲಾದ ಜೈವಿಕ ಸಂಪನ್ಮೂಲಗಳನ್ನು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಹೊಂದುವ ಅವಕಾಶ ವಿವರಗಳ ಬಗ್ಗೆ ವಿಧಿಸಲಾದ ಸಂಗ್ರಹಣಾ ಶುಲ್ಕದ ವಿವರಗಳ ಬಗ್ಗೆ ಮತ್ತು ಪ್ರಾಪ್ತವಾದ ಪ್ರಯೋಜನಗಳ ವಿವರಗಳು ಮತ್ತು ಅವುಗಳ ಹಂಚಿಕೆಯ ವಿಧಾನದ ಬಗ್ಗೆ ಮಾಹಿತಿಯನ್ನು ನೀಡುವ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.
7. ಜೀವವೈವಿಧ್ಯ ಹಾಗೂ ಜೀವವೈವಿಧ್ಯ ಸಂಬಂಧಿತ ಸ್ಥಳೀಯ ಸಂಪ್ರದಾಯಿಕ ಜ್ಞಾನದ ದಾಖಲಾತಿ ಮಾಡುವ ಕೆಲಸದಲ್ಲಿ ತೊಡಗಿಕೊಳ್ಳುವುದು ಸಮಿತಿಯ ಜವಾಬ್ದಾರಿಯಾಗಿರುತ್ತದೆ.
8. ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ನಿರ್ದೇಶನದಂತೆ ಜೀವವೈವಿಧ್ಯ ಅನುದಾನದ ಬಳಕೆ ಹಾಗೂ ನಿರ್ವಹಣೆ.

ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರ ಸಹಿ

ಕಾರ್ಯನಿರ್ವಾಹಣಾಧಿಕಾರಿಗಳು
ತಾಲ್ಲೂಕು ಪಂಚಾಯ್ತಿ ಹುಣಸೂರು

ನೋಡಲ್ ಅಧಿಕಾರಿ ಸಹಿ